ಹುರುಕುಡ್ಲಿ ಲಾ ಕಾಲೇಜಿನಲ್ಲಿ ಎಲ್‌ಎಲ್‌ಬಿ ಕೊನೆಯ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ತೆಲುಗಿಗೂ ಹೋಗಿ ಒಂದು ಧಾರಾವಾಹಿ ಮಾಡಿ ಬಂದಿರುವ ಅವರು, ಕುಮಾರ್ ನಿರ್ದೇಶನದ ‘ಕ್ರಿಟಿಕಲ್ ಕೀರ್ತನೆಗಳು’ ಎಂಬ ಸಿನಿಮಾದಲ್ಲಿ ಮುಖ್ಯಪಾತ್ರವೊಂದರಲ್ಲಿ ನಟಿಸಿದ್ದಾರೆ.

‘ಕ್ರಿಟಿಕಲ್ ಕೀರ್ತನೆಗಳು ತುಂಬ ಒಳ್ಳೆಯ ಕಥೆಯುಳ್ಳ ಸಿನಿಮಾ. ಅಷ್ಟೇ ಒಳ್ಳೆಯ ಸಂದೇಶವೂ ಇದೆ. ಬೆಟ್ಟಿಂಗ್ ಕಟ್ಟಿ ಮೋಸ ಹೋಗುತ್ತಾರೆ. ದುಡ್ಡು, ಬದುಕು ಎರಡೂ ಹಾಳು ಮಾಡಿಕೊಳ್ಳುತ್ತಾರೆ. ಸೂಸೈಡ್ ಮಾಡಿಕೊಳ್ತಾರೆ. ಇದರಿಂದ ಆಗುವ ಅನಾಹುತಗಳನ್ನು ಇಟ್ಟುಕೊಂಡೇ ಸಿನಿಮಾ ಮಾಡಿದ್ದಾರೆ. ತುಂಬಾ ಚೆನ್ನಾಗಿ ಮೂಡಿಬಂದಿದೆ. ಕೊರೊನಾ ಕಾರಣದಿಂದ ಬಿಡುಗಡೆ ತಡವಾಗಿದೆ. ಚಿತ್ರಮಂದಿರಗಳು ಶುರುವಾಗಿ ಜನರು ಬರಲು ಶುರುಮಾಡಿದ ಮೇಲೆ ಬಿಡುಗಡೆ ಮಾಡುವ ಯೋಚನೆ ಇದೆ’ ಎಂದು ಸಿನಿಮಾ ಬಗ್ಗೆ ವಿವರಿಸುತ್ತಾರೆ. ಈ ಚಿತ್ರದಲ್ಲಿ ತನ್ನ ಪ್ರಿಯಕರನಿಗಾಗಿ ಏನು ಬೇಕಾದರೂ ಮಾಡುವ ಬಬ್ಲಿ ಹುಡುಗಿಯ ಪಾತ್ರದಲ್ಲಿ ಅವರು ನಟಿಸಿದ್ದಾರಂತೆ.

ದೀಪಾಗೆ ಒಮ್ಮೆ ಬಜಾರಿ ಪಾತ್ರದಲ್ಲಿ ನಟಿಸಬೇಕು ಎಂಬ ಹಂಬಲ ಇದೆ. ನಾವು ಮಾಡುವ ಕೆಲಸವನ್ನು ಅತ್ಯಂತ ಶ್ರದ್ಧೆಯಿಂದ ಮಾಡಬೇಕು ಎನ್ನುವುದು ಅವರ ಸಿದ್ಧಾಂತ.

‘ಸುಮ್ಮನೆ ಬರ್ತೀವಿ, ಮೇಕಪ್ ಮಾಡಿಕೊಂಡು ನಟಿಸಿ ಹೋಗ್ತೀವಿ ಅಂದ್ರೆ ಯಾವ ಉಪಯೋಗವೂ ಇಲ್ಲ. ತುಂಬ ಕಡಿಮೆ ಜನರಿಗೆ ಹೀಗೆ ನಟನೆಯ ಅವಕಾಶ ಸಿಗುತ್ತದೆ. ಅದನ್ನು ನಾವು ಗೌರವದಿಂದ ಕಾಣಬೇಕಲ್ಲವೇ? ನಾವು ಮಾಡುವ ಕೆಲಸದ ಬಗ್ಗೆ ಶ್ರದ್ಧೆ ಇದ್ದರೆ ಅದೇ ನಮ್ಮನ್ನು ಕಾಪಾಡುತ್ತದೆ’ ಎನ್ನುವ ದೀಪಾ, ತಮ್ಮ ಪ್ರತಿಭೆಗೆ ಸಾಣೆ ಒಡ್ಡುವಂಥ ಪಾತ್ರಗಳಿಗೆ ಕಾತರದಿಂದ ಕಾಯುತ್ತಿದ್ದಾರೆ.

ಇನ್ನೂ ಶೀರ್ಷಿಕೆ ಅಂತಿಮಗೊಳ್ಳದ ಸಿನಿಮಾವೊಂದರಲ್ಲಿ ಶ್ರುತಿ ಮಹತ್ವದ ಪಾತ್ರವೊಂದನ್ನು ನಿರ್ವಹಿಸುತ್ತಿದ್ದಾರೆ. ‘ಇದು ನಾಯಕಿ ಪ್ರಧಾನ ಸಿನಿಮಾ ಅಲ್ಲ. ಅಲ್ಲದೆ ಈ ಸಿನಿಮಾದಲ್ಲಿ ಶ್ರುತಿ ನಾಯಕಿಯೂ ಅಲ್ಲ. ಆದರೆ ಒಂದು ಮುಖ್ಯ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಈ ಕಥೆಯೇ ತುಂಬ ಭಿನ್ನವಾದದ್ದು. ಇದರಲ್ಲಿ ನಾಯಕ ನಾಯಕಿಗಿಂತ ಹಲವು ಪಾತ್ರಗಳ ಮೂಲಕ ಕಥೆ ಬಿಚ್ಚಿಕೊಳ್ಳುತ್ತ ಹೋಗುತ್ತದೆ’ ಎನ್ನುತ್ತವೆ ಚಿತ್ರತಂಡದ ಮೂಲಗಳು. ಭಿನ್ನವಾದ ಕಥೆಯನ್ನು ಅಷ್ಟೇ ಭಿನ್ನವಾದ ಲೊಕೇಶನ್‌ಗಳಲ್ಲಿ ಚಿತ್ರೀಕರಿಸಲು ತಂಡ ಯೋಜನೆ ಹಾಕಿದೆಯಂತೆ.

ಈ ಶುರುವಾತು ಮತ್ತಷ್ಟು ಹೊಸ ಪ್ರಯೋಗಗಳಿಗೆ, ಉತ್ತಮ ಅವಕಾಶಗಳಿಗೆ ನಾಂದಿ ಹಾಡುತ್ತದೆ ಎಂಬ ವಿಶ್ವಾಸದಲ್ಲಿ ಶ್ರುತಿ ಇದ್ದಾರಂತೆ. ಶ್ರುತಿ ಮತ್ತೆ ಚಿತ್ರರಂಗದಲ್ಲಿ ಮಿಂಚುವಂತಾದರೆ, ಇದುವರೆಗೆ ಅವರನ್ನು ಮಟ್ಟಹಾಕಿದೆವೆಂದು ಅಟ್ಟಹಾಸ ಮಾಡುತ್ತಿದ್ದವರಿಗೆ ಒಂದು ಗಟ್ಟಿಯಾದ ಸಂದೇಶವಂತೂ ರವಾನೆಯಾಗುತ್ತದೆ.

# ಪೆಟ್ರೊಮ್ಯಾಕ್ಸ್ ಹಳೇದು ಬೆಳಕು ಹೊಸಾದು







‘ಸಿದ್ಲಿಂಗು’, ‘ನೀರ್ ದೋಸೆ’ಯಂಥ ಹಿಟ್ ಸಿನಿಮಾಗಳನ್ನು ಕೊಟ್ಟರೂ ನಿರ್ದೇಶಕ ವಿಜಯಪ್ರಸಾದ್ ಕೈತುಂಬ ಸಿನಿಮಾಗಳನ್ನು ಇಟ್ಟುಕೊಂಡು ಕೂತವರಲ್ಲ. ಒಂದು ಸಿನಿಮಾ ಮಾಡಿ ಹಲವು ವರ್ಷಗಳ ನಂತರ ದಿಢೀರನೇ ಬಂದು ಮತ್ತೊಂದು ಸಿನಿಮಾ ಮಾಡಿ ಹೋಗುವ ಅವರಿಗೆ ಗಾಂಧಿನಗರ ಅಪರೂಪಕ್ಕೊಮ್ಮೆ ಭೇಟಿ ನೀಡುವ ಪುಣ್ಯಕ್ಷೇತ್ರದ ಹಾಗೆ.

ಈಗ ವಿಜಯಪ್ರಸಾದ್ ವರಸೆ ತುಸು ಬದಲಾದಂತಿದೆ. ಸದ್ಯಕ್ಕಂತೂ ಅವರು ಗಾಂಧಿನಗರದವೆಂಬ ಪುಣ್ಯಕ್ಷೇತ್ರದಲ್ಲಿಯೇ ಬಿಡಾರ ಹೂಡಿರುವಂತಿದೆ. ‘ನೀರ್ ದೋಸೆ’ ಮಾಡಿ ವರ್ಷಗಳ ನಂತರ ಜಗ್ಗೇಶ್ ಜೊತೆಗೂಡಿ ‘ತೋತಾಪುರಿ’ ಸಿನಿಮಾ ಕೈಗೆತ್ತಿಕೊಂಡಿದ್ದು ಗೊತ್ತಿರುವ ವಿಷಯವೇ. ಆದರೆ ಆ ಸಿನಿಮಾದ ಜೊತೆಗೇ ಅವರು ಇನ್ನೂ ಎರಡು ಟೈಟಲ್‌ಗಳನ್ನು ಘೋಷಿಸಿದ್ದರು. ‘ಪೆಟ್ರೊಮ್ಯಾಕ್ಸ್’ ಮತ್ತು ‘ಲೇಡೀಸ್ ಟ್ರೈಲರ್”, ಅದಾದ ಕೆಲವು ದಿನಗಳ ನಂತರ ‘ಪರಿಮಳ ಲಾಡ್ಜ್’ ಎಂಬ ಸಿನಿಮಾದ ಟೀಸರ್ ಅನ್ನೇ ಬಿಡುಗಡೆ ಮಾಡಿ ಪಡ್ಡೆಗಳಿಗೆ ಚಪ್ಪರಿಸುವಂಥ ಗುಳಿಗೆಯನ್ನು ಕೊಟ್ಟಿದ್ದರು.

‘ಎರಡನೇ ಸಿನಿಮಾ ಮಾಡೋಕೇ ನಾಲ್ಕು ವರ್ಷ ಗ್ಯಾಪ್ ತಗೊಂಡೋರು; ಇನ್ನು ವರ್ಷಕ್ಕೆ ನಾಲ್ಕು ಸಿನಿಮಾ ಮಾಡ್ತಾರಾ?’ ಎಂಬ ಮಾತು ಗಾಂಧಿನಗರ ಹರಟೆಕಟ್ಟೆಯಲ್ಲಿ ಜೋಕಾಗಿ ಹರಿದಾಡಿತ್ತು. ಆದರೆ ಅವರ ಮುಖದಲ್ಲಿ ನಗುವಿನ ಜಾಗದಲ್ಲಿ ಬೆರಗನ್ನು ಅಂಟಿಸಲು ವಿಜಯ್‌ಪ್ರಸಾದ್ ಪಣ ತೊಟ್ಟಿರುವಂತೆ ಕಾಣುತ್ತಿದೆ. ಪೆಟ್ರೊಮ್ಯಾಕ್ಸ್ ಕಥೆ ಮುಗಿಯಿತು ಎನ್ನುವ ಹೊತ್ತಿನಲ್ಲಿಯೇ ಹೊಸ ಕಥೆಯೊಂದಿಗೆ ಅದೇ ಟೈಟಲ್ ಇಟ್ಟುಕೊಂಡು ಅವರು ಚಿತ್ರೀಕರಣಕ್ಕೆ ಮುಂದಾಗಿದ್ದಾರೆ.

ನೀನಾಸಂ ಸತೀಶ್ ಮತ್ತು ವಿಜಯಪ್ರಸಾದ್ ಕಾಂಬಿನೇಷನ್‌ನಲ್ಲಿ ರೂಪುಗೊಳ್ಳುತ್ತಿರುವ ಈ ಸಿನಿಮಾಗೆ ಅದಿತಿ ಪ್ರಭುದೇವ ನಾಯಕಿ. ಅಕ್ಟೋಬರ್ ಹತ್ತರಿಂದ ಮೈಸೂರಿನ ಸುತ್ತಮುತ್ತಲಿನ ಜಾಗದಲ್ಲಿ ಈ ಸಿನಿಮಾ ಚಿತ್ರೀಕರಣ ಪ್ರಾರಂಭವಾಗುತ್ತದಂತೆ.

‘ನಾಲ್ವರು ಅನಾಥರ ಬದುಕಿನ ಕಥೆ ಈ ಸಿನಿಮಾದಲ್ಲಿದೆ. ಇದೊಂದು ಎಮೋಷನಲ್ ಡ್ರಾಮ. ಚೇಷ್ಟೆಯೂ ಕಮ್ಮಿಯೇನಿರುವುದಿಲ್ಲ’ ಎನ್ನುತ್ತಾರೆ ನಿರ್ದೇಶಕರು.‘ಗೊಂಬೆಗಳ ಲವ್’ ನಾಯಕ ಅರುಣ್, ನಾಗಭೂಷಣ್ ಮತ್ತು ಹೇಮಾ ದತ್ ಈ ಚಿತ್ರದ ಮುಖ್ಯಭೂಮಿಕೆಯಲ್ಲಿ ಇರಲಿದ್ದಾರೆ.